O.S. NO. 100/2022

PW -1 .

Dated: 26-07-2024.

<u>ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಿದೆ.</u>

<u>ಪಾಟೀ ಸವಾಲುಃ 1 ರಿಂದ 4 ನೇ ಪ್ರತಿವಾದಿ ಪರವಾಗಿ ಶ್ರೀ ಎಸ್ ಎಸ್ ಎ ವಕೀಲರಿಂದಃ</u>

1. ನಾನು ಎಸ್ ಎಸ್ ಎಲ್ ಸಿ ವರೆಗೆ ಕಲಿತಿರುತ್ತೇನೆ. ನನಗೆ ಕನ್ನಡ ಓದು, ಬರಹ ಬರುತ್ತದೆ. ನಾನು ಶೇತ್ಕಿ ಕೆಲಸ ಮಾಡುತ್ತಿದ್ದೇನು. ನಾನು ಶೇತ್ಕಿ ಕೆಲಸವನ್ನು ಹೊರತುಪಡಿಸಿ ಬೇರೆ ಉದ್ಯೋಗ ಮಾಡುತ್ತಿಲ್ಲ. ನಾನು ಸಂಪಗಾವ ಗ್ರಾಮದ ಹನುಮಂತ ದೇವರ ಗುಡಿ ಹತ್ತಿರ ಪಟ್ಟಿ ಅಂಗಡಿ ಇಟ್ಟು ಕೊಂಡು ವ್ಯಾಪಾರ ಮಾಡುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಈ ಪ್ರಸ್ತುತ ಪ್ರಕರಣದಲ್ಲಿ ಪಕ್ಷಗಾರ ಇರುವುದಿಲ್ಲ ಎಂದರೆ ನಿಜ. ಸಾಕ್ಷಿ ಮುಂದುವರೆದು ನನ್ನ ತಂದೆಯವರು ಇರುತ್ತಾರೆ ಎಂದು ನುಡಿದಿರುತ್ತಾರೆ. ನನ್ನ ತಂದೆ ಈಗ ಆರೋಗ್ಯವಂತರಾಗಿರುತ್ತಾರೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆ ಕಣ್ಣು ಕಾಣುವುದಿಲ್ಲ ಮತ್ತು ಕಿವಿ ಕೇಳುವುದಿಲ್ಲ, ಅವರಿಗೆ ಶುಗರ ಮತ್ತು ಬಿಪಿ ಇರುತ್ತದೆ ಎಂದು ನುಡಿದಿರುತ್ತಾರೆ. ಈ ಕುರಿತು ನಾನು ದಾಖಲೆಗಳನ್ನು ಹಾಜರುಪಡಿಸಿರುತ್ತೇನೆ. ನಾನು ಹೇಳುವಂತೆ ಯಾವುದೇ ವೈದ್ಯರಿಂದ ಪಡೆದ ದಾಖಲೆಗಳನ್ನು ಹಾಜರು ಪಡಿಸಿರುವುದಿಲ್ಲ ಎಂದರೆ ಸರಿಯಲ್ಲ. 5 ನೇ ಪ್ರತಿವಾದಿ ಗಂಗಪ್ಪನ ಮಗ ಅವಿನಾಶ ಹಿರಿಯ ನ್ಯಾಯಾಲಯದಲ್ಲಿ ವಾಟ್ನಿ ಕೊರಿ ದಾವೆ ಸಲ್ಲಿಸಿದರು ಎಂದರೆ ನಿಜ. ಅದರ ಸಂಖ್ಯೆ OS No. 83/2017 ಅಂತಾ ಇರುತ್ತದೆ ಎಂದರೆ ಸರಿ. ಸದರಿ ಅಸಲು ದಾವಾ ಸಂಖ್ಯೆ 83/2017 ಯಲ್ಲಿ ನನ್ನ ತಂದೆ ಸ್ವತಃ ಹಾಜರಾಗಿ ಸದರಿ ದಾವಾದ ನಡುವಳಿಕೆಯಲ್ಲಿ ಪಾಲ್ಗೊಂಡಿರುತ್ತಾರೆ ಎಂದರೆ ಸರಿ. ಪ್ರಸ್ತುತ ದಾವೆಯನ್ನು ಸಹ ನನ್ನ ತಂದೆ ಸ್ವತಃ ಬಂದು ಸಲ್ಲಿಸಿರುತ್ತಾರೆ ಎಂದರೆ ನಾನು ಅವರ ಜೊತೆ ಬಂದಿದ್ದೇನು ಎಂದು ನುಡಿದಿರುತ್ತಾರೆ. ಪ್ರಸ್ತುತ ದಾವಾ ವಾದ ಪತ್ರ ಮತ್ತು ಸತ್ಯಾಪಣೆ ಪ್ರಮಾಗಣ ಪತ್ರ ಹಾಗೂ ವಕಾಲತನಲ್ಲಿ ನನ್ನ ತಂದೆ ಸ್ವತಃ ಸಹಿ ಮಾಡಿರುತ್ತಾರೆ ಎಂದರೆ ಸರಿ. ಈಗಲೂ ಸಹ ನನ್ನ

ತಂದೆ ಮನೆಯಿಂದ ಹೊಲಕ್ಕೆ ಹೊಗಿ ಕೆಲಸ ಮಾಡಿಕೊಂಡು ಬರುತ್ತಾರೆ. ನಾನು ಹೇಳುವಂತೆ ಅವರಿಗೆ ದೈಹಿಕ ನ್ಯೂನ್ಯತೆ ಇರುವುದಿಲ್ಲ ಎಂದರೆ ಸರಿಯಲ್ಲ.

2. ನನ್ನ ತಂದೆ ಮುಕ್ತಿಯಾರ ಪತ್ರ ಬರೆದು ಕೊಡಲು ನ್ಯಾಯಾಲಯಕ್ಕೆ ಬಂದಿದ್ದರು. ಸದರಿ ವಿಶೇಷ ಮುಕ್ತಿಯಾರ ಪತ್ರಕ್ಕೆ ನನ್ನ ಒಪ್ಪಿಗೆ ಇರುತ್ತದೆ ಅಂತಾ ಸಹಿ ಮಾಡಿರುತ್ತೇನೆ. ಈಗ ತೋರಿಸಿದ ವಿಶೇಷ ಮುಕ್ತಿಯಾರ ಪತ್ರದಲ್ಲಿ ನನ್ನ ಸಹಿ ಇರುವುದಿಲ್ಲ. ಸದರಿ ವಿಶೇಷ ಮುಕ್ತಿಯಾರ ಪತ್ರಕವನ್ನು ನಿಪಿ - 34 ಅಂತಾ ಗುರುತಿಸಲಾಯಿತು. ನಿಪಿ -34 ರಲ್ಲಿ ನೊಟರಿಯವರ ನೊಂದಣೆ ಸಂಖ್ಯೆ ಬರೆದಿರುವುದಿಲ್ಲ ಎಂದರೆ ಸರಿ. ನಾನು ಹಾಜರುಪಡಿಸಿದ ನಿಪಿ - 34 ಕಾನೂನು ಬದ್ದವಾಗಿ ಇರುವುದ್ದಿಲ ಆದ್ದರಿಂದ ನಾನು ನನ್ನ ತಂದೆಯ ಪರವಾಗಿ ಸಾಕ್ಷಿ ಹೇಳಲು ನನಗೆ ಯಾವುದೇ ಅಧಿಕಾರ ಇರುವುದಿಲ್ಲ ಎಂದರೆ ಸರಿಯಲ್ಲ. ನಾನು ಹೇಳುವಂತೆ ನನ್ನ ತಂದೆ ನನಗೆ ಯಾವುದೇ ವಿಶೇಷ ಮುಕ್ತಿಯಾರ ಪತ್ರ ಬರೆದು ಕೊಟ್ಟಿರುವುದಿಲ್ಲ ಎಂದರೆ ಸರಿಯಲ್ಲ. ನನ್ನ ತಂದೆ ದೈಹಿಕವಾಗಿ ಸದೃಡನಾಗಿದ್ದರು ಸಹ ಅದನ್ನು ಮರೆಮಾಚಿ ನಾನು ಬಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

3. ಪ್ರಸ್ತುತ ದಾವೆ ವಾದ ಪತ್ರ ತಯಾರಿಸಲು ನಾನು ಮತ್ತು ನನ್ನ ತಂದೆ ಸೇರಿ ಮಾಹಿತಿ ನೀಡಿರುತ್ತೇವೆ. ಅಸಲು ದಾವಾ ಸಂಖ್ಯೆ 83/2017 ನನ್ನ ತಂದೆಯ ಲಿಖಿತ ಹೇಳಿಕೆ ತಯಾರಿಸುವಾಗ ಅವಿನಾಶ ಮಾಹಿತಿ ನೀಡಿರುತ್ತಾನೆ. ಅಸಲು ದಾವಾ ಸಂಖ್ಯೆ 83/2017 ರಲ್ಲಿ ನನ್ನ ತಂದೆ ತನಗೆ ವಾದಿ ಅಂತಾ ಬದಲಾಯಿಸುವಂತೆ ಅರ್ಜಿ ಹಾಕಿಕೊಂಡಿದ್ದರು ಸದರಿ ಅರ್ಜಿ ಪುರಸ್ಕರಿಸಲಾಗಿತ್ತು ಎಂದರೆ ಸರಿ. ಸದರಿ ದಾವೆಯಲ್ಲಿ ನನ್ನ ತಂದೆ ವಾದ ಪತ್ರ ತಿದ್ದುಪಡಿಗಾಗಿ ಸಲ್ಲಿಸಿದ

O.S. NO. 100/2022

PW -1 .

Dated: 26-07-2024.

ಅರ್ಜಿ ವಜಾಗೊಂಡಿತ್ತು ಎಂದರೆ ನಿಜ. ಸದರಿ ವಜಾಗೊಂಡ ಆದೇಶದ ಮೇಲೆ ನಾವು ಮೆಲ್ಮನವಿ ಸಲ್ಲಿಸಿರುವುದಿಲ್ಲ.

4. ಪ್ರಸ್ತುತ ದಾವೆಯಲ್ಲಿ ವಾಟ್ನಿ ಪತ್ರ ಮತ್ತು ಹಕ್ಕು ಬಿಟ್ಟು ಪತ್ರ ಸರಿಯಾಗಿ ಆಗಿರುವುದಿಲ್ಲ ಅಂತಾ ಪರಿಹಾರ ಕೊರಿ ಸಲ್ಲಿಸಲಾಗಿರುತ್ತದೆ. ನನ್ನ ಪ್ರಕಾರ ವಾಟ್ನಿ ಪತ್ರ ಮತ್ತು ಹಕ್ಕು ಬಿಟ್ಟು ಪತ್ರ ಆಗಿತ್ತು ಆದರೆ ಅವುಗಳು ಸರಿಯಾಗಿ ಆಗಿರಲಿಲ್ಲ. ನಾನು ಸಾಕ್ಷಿ ಹೇಳಲು ಬರುವ ಪೂರ್ವದಲ್ಲಿ ಪ್ರಸ್ತುತ ದಾವೆಯ ವಾದ ಪತ್ರ ಮತ್ತು ಪ್ರತಿವಾದ ಪತ್ರ ಓದಿಸಿ ತಿಳಿದುಕೊಂಡಿರುತ್ತೇನೆ. ನನಗೆ ದಾವಾ ಆಸ್ತಿಗಳ ಸರ್ವೆ ನಂಬರಗಳು ಹೇಳಲು ಬರುವುದಿಲ್ಲ. ದಾವಾ ಆಸ್ತಿಗಳ ಪೈಕಿ ಮೂಲ ಪಿತ್ರಾರ್ಜಿತ ಆಸ್ತಿಗಳು ಮತ್ತು ಖರೀದಿ ಮಾಡಿರುವ ಆಸ್ತಿಗಳು ಯಾವುವು ಎಂದು ನನಗೆ ಹೇಳಲು ಬರುವುದಿಲ್ಲ. ಅದೇ ರೀತಿ ಭೂನ್ಯಾಯ ಮಂಡಳಿಯಿಂದ ಮಂಜೂರಾದ ಜಮಿನುಗಳು ಯಾವುವು ಎಂದು ನನಗೆ ಹೇಳಲು ಬರುವುದಿಲ್ಲ. ನಮ್ಮ ಅಜ್ಜನಿಂದ ಬಂದ ಪಿತ್ರಾರ್ಜಿತ ಆಸ್ತಿಗಳ ಕ್ಷೇತ್ರ ನನಗೆ ಹೇಳಲು ಬರುವುದಿಲ್ಲ. ಅದೇ ರೀತಿ ಖರೀದಿ ಆದಂತಹ ಆಸ್ತಿಗಳ ಕ್ಷೇತ್ರ ನನಗೆ ಹೇಳಲು ಬರುವುದಿಲ್ಲ.

(ಈ ಹಂತದಲ್ಲಿ ಮುಂದುವರೆದ ಪಾಟಿ ಸವಾಲಿಗೆ ವಕೀಲರು ಕಾಲಾವಕಾಶ ಕೋರಿದ್ದರಿಂದ ಕಾಲಾವಕಾಶ ನೀಡಿ ಮುಂದುಡಲಾಯಿತು . )

(ಸಾಕ್ಷಿ ವಿಚಾರಣೆಯನ್ನು ನೆರವೇರಿಸಿದ್ದು , ಸಾಕ್ಷಿ ಹೇಳಿದ ಹೇಳಿಕೆಯನ್ನು ಬೆರಳಚ್ಚುಗಾರರಿಗೆ ಉಕ್ತ ಲೇಖನ ನೀಡಿ , ಅದನ್ನು ಗಣಕಿಕೃತಗೊಳಿಸಿದ ಮೇರೆಗೆ ದಾಖಲಿಸಲಾಯಿತು ).

ಓ ಹೇ ಕೇ ಸರಿ ಇದೆ.

ಹಿರಿಯ ದಿವಾಣಿ ನ್ಯಾಯಾಧೀಶರು
ಬೈಲಹೊಂಗಲ.